ಆ) ಗೋವಾಳ ಜಮೀನಿನ ಉಸ್ತವಾರಿಯನ್ನು ಕೆ.ಎಂ.ಎಫ್. ಸಂಸ್ಥೆಗೆ ವಹಿಸಿ ಅಭಿವೃದ್ದಿಪಡಿಸುವ ಬಗ್ಗೆ ಯಾವುದೇ ಪ್ರಸ್ತಾವನೆ ಪಶುಸಂಗೋಪನಾ ಇಲಾಖೆಯಿಂದ ಬಂದಿರುವುದಿಲ್ಲ.

ಇ) "ಅ" ಮತ್ತು "ಆ" ಪ್ರಶ್ನೆಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.

758(815) ಶ್ರೀ ಕೃಷ್ಣ ಪಾಲೇಮಾರ್. ಜೆ(ಸುರತ್ಕಲ್) : ಮಾನ್ಯ ಪ್ರವಾಸೋದ್ಯಮ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಗುರುತಿಸಲ್ಪಟ್ಟ ಕಡಲ ತೀರಗಳ ಸಂಖ್ಯೆ ಎಷ್ಟು ;

ಆ) ಅನ್ವೇಷಣೆಗೆ ಒಳಪಡದ ಕಡಲ ತೀರಗಳು ಇನ್ನೂ ಉಳಿದಿವೆಯೇ ;

ಇ) ಕಡಲ ತೀರಗಳಿಗೆ ಮೂಲಭೂತ ಸಂಪರ್ಕ ರಸ್ತೆಗಳ ಸೌಲಭ್ಯಗಳನ್ನು ಒದಗಿಸಲು ಸರ್ಕಾರದ ಕಾರ್ಯ ಯೋಜನೆಗಳೇನು ;

ಈ) ಕಡಲ ತೀರಗಳ ಅಭಿವೃದ್ಧಿಗಾಗಿ ಆಯವ್ಯಯದಲ್ಲಿ ನಿಗಧಿಪಡಿಸಲಾದ ಮೊತ್ತ ಎಷ್ಟು:

ಶ್ರೀ ಡಿ.ಟಿ. ಜಯಕುಮಾರ್ (ಪ್ರವಾಸೋದ್ಯಮ ಸಚಿವರು):

ಅ) ಒಂಭತ್ತು(9)

ಆ) ಹೌದು

ಇ) ಪ್ರವಾಸಿ ಸ್ಥಳಗಳಲ್ಲಿ ಹೋಗುವ ಸಂಪರ್ಕ ರಸ್ತೆಗಳನ್ನು ಹುಡ್ಕೋ ಮೂಲಕ ಅಭಿವೃದ್ದಿ ಪಡಿಸಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ.

ಈ) ರೂ.25.00 ಲಕ್ಷ(ರೂಪಾಯಿ ಇಪ್ಪತ್ತೈದು ಲಕ್ಷಗಳು ಮಾತ್ರ)

760(1336) ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕಿನಾದ್ಯಂತ ಪರಿವರ್ತಕಗಳನ್ನು (ಟಿ.ಸಿ) ಹೆಚ್ಚುವರಿಯಾಗಿ ಅಳವಡಿಸಲು 1998 ರಲ್ಲಿ ಕಾರ್ಯಾದೇಶವಾಗಿದ್ದರೂ ಇಲ್ಲಿಯವರೆಗೆ ಕೇವಲ ಅರ್ಧದಷ್ಟು ಸಾಮಗ್ರಿಗಳನ್ನು ಮಾತ್ರ ಬಿಡುಗಡೆಗೊಳಿಸಿ, ಈಗ ಕಾಮಗಾರಿ ಪೂರ್ಣಗೊಳ್ಳುವ ಮೊದಲೇ ಬಾಕಿ ಸಾಮಗ್ರಿಗಳಿಗೆ ಬಜೆಟ್ ಕೇಳುತ್ತಿರುವುದು ಏಕೆ;

ಆ) ಸದರಿ ಸಾಮಗ್ರಿಗಳನ್ನು ಯಾವಾಗ ಬಿಡುಗಡೆಗೊಳಿಸಲಾಗುವುದು ಮತ್ತು ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು ?

ಶ್ರೀ ಹೆಚ್.ಡಿ.ರೇವಣ್ಣ(ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯ ವ್ಯಾಪ್ತಿಯಲ್ಲಿ ಬರುವ ಚಿಕ್ಕಮಗಳೂರು ಜಿಲ್ಲೆತರೀಕೆರೆ ತಾಲ್ಲೂಕಿನಾದ್ಯಾಂತ ಹೆಚ್ಚುವರಿ ಪರಿವರ್ತಕಗಳನ್ನು (ಟಿ.ಸಿ) ಅಳವಡಿಸಲು 1998 ರಲ್ಲಿ ಕಾಯಾದೇಶವಾದ ಎಲ್ಲಾ ಕಾಮಗಾರಿಗಳು ಮುಕ್ತಾಯವಾಗಿರುತ್ತವೆ. ನಂತರದ ವರ್ಷಗಳಲ್ಲಿ ಮಂಜೂರಾದ ಕೆಲವು ಕಾಮಗಾರಿಗಳು ಪ್ರಗತಿಯಲ್ಲಿವೆ. ಅವುಗಳನ್ನು ಪೂರ್ಣಗೊಳಿಸಲು ಅಗತ್ಯ ಸಾಮಗ್ರಿಗಳ ಅವಶ್ಯಕತೆ ಇದೆ.